ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ, ಪಂಚಾಯಂತ್ ರಾಜ್ ಮತ್ತು ವಕ್ಫ್ ಮಂತ್ರಿಗಳು).—

ಅ) ಯಾವುದೂ ಇಲ್ಲ

ಆ) ಉದ್ಭವಿಸುವುದಿಲ್ಲ

ಜಿಲ್ಲಾ ಪರಿಷತ್ತುಗಳಿಗೆ ಒದಗಿಸಿದ ಹಣ

೪೧. ಶ್ರೀ ಗೋಪಾಲ ಮುಕಂದ ಕಾನಡೆ (ಸಿರ್ಸಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಿಲ್ಲಾ ಪರಿಷತ್ತುಗಳಿಗೆ ೧೯೮೬-೮೭ನೇ ಸಾಲಿನಲ್ಲಿ ಒದಗಿಸಿದ ಹಣವೆಷ್ಟು ? (ಜಿಲ್ಲಾವಾರು ಪರಿಷತ್ತುಗಳಿಗೆ ಒದಗಿಸಿರುವ ವಿವರಗಳೊನ್ನದಗಿಸುವುದು)

ಆ) ಜಿಲ್ಲಾ ಪರಿಷತ್ತುಗಳಿಗೆ ಒದಗಿಸಿದ ಹಣದಲ್ಲಿ ಯಾವ್ಯಾವ ಜಿಲ್ಲಾ ಪರಿಷತ್ತುಗಳಿಗೆ ಶೇ. ೧೮ ರಷ್ಟು ಒದಗಿಸಲಾಗಿದೆ, ಹಾಗೂ ವೆಚ್ಚ ಮಾಡಿದ ಪೊತ್ತವೆಷ್ಟು ?

ಇ) ಹಣ ಖರ್ಚಾಗದೆ ಉಳಿಯಲು ಕಾರಣವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದಿದ್ದು ೧೯೮೬-೮೮ನೇ ಸಾಲಿನಲ್ಲಿ ಆದ್ದರಿಂದ ೧೯೮೬-೮೭ನೇ ಸಾಲಿನಲ್ಲಿ ಹಣ ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ:

ಆ) ''ಅ'' ನಲ್ಲಿ ತಿಳಿಸಿರುವ ಕಾರಣದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಜಿಲ್ಲಾ ಪರಿಷತ್‌ಗಳಿಗೆ ೧೯೮೬-೮೮ನೇ ಸಾಲಿಗೆ ಬಿಡುಗಡೆ ಮಾಡಿರುವ ಹಣದ ಬಗ್ಗೆ

೭೫. ಶ್ರೀ ಆರ್. ರಾಮಯ್ಯ (ಹಿರಿಯೂರು).— ಮಾನ್ಯ ಗ್ರಾಮೀಣ ಅಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೬-೮೮ನೇ ಸಾಲಿಗೆ ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಪರಿಷತ್‌ಗಳಿಗೆ ಬಿಡುಗಡೆ ಮಾಡಿರುವ ಹಣವೆಷ್ಟು ?

ಆ) ಇದು ಸದನದಲ್ಲಿ ಆಶ್ವಾಸನೆ ನೀಡಿರುವ (ಸುಮಾರು ೯೬೦ ಕೋಟಿ) ಹಣದ ಗುರಿಯನ್ನು ಸರಿಗಟ್ಟಿದೆಯೇ ?

ಇ) ಈ ಹಣದಲ್ಲಿ ಚಿತ್ರದುರ್ಗ ಜಿಲ್ಲಾ ಪರಿಷತ್‌ಗೆ ಎಷ್ಟು ಸಂದಾಯವಾಗಿದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಅನುಬಂಧ ''ಅ''ನಲ್ಲಿ ಒದಗಿಸಲಾಗಿದೆ.

ಆ) ಹೌದು

ಇ) ೩೫೧೧.೬೫ ಲಕ್ಷ ರೂಪಾಯಿಂಗಳು